ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಲಾಟ್ ಪಂಚರ್ ಎಂಬ ಹಳ್ಳಿ

ತುಂಬಾ ನಿರೀಕ್ಷೆ, ಅತಿಯಾಸೆ ಹೊತ್ತು ಹಳದಿ ಹಸಿರು ಬಣ್ಣದ ಲಾಂಗ್ ಟೈಯಿಲ್ಡ್ ಬ್ರೋಡ್ ಬಿಲ್, ರಕ್ತ ವರ್ಣದ ಸುಂದರ ರೆಡ್ ಹೆಡೆಡ್ ಟ್ರೋಗನ್; ಹಾಗೂ ಚಿತ್ತಾರದ ಕೊಕ್ಕಿನ ರೂಪಸ್ ಹಾರ್ನ್ ಬಿಲ್ ಎಂಬ ಈ ಮೂರು ಹಕ್ಕಿಗಳನ್ನು ಹುಡುಕಬೇಕಾಗಿತ್ತು. ಮೂರು ಹಕ್ಕಿಗಳಲ್ಲಿ ಎರಡರ ನೆಲೆ ಪಕ್ಕಾ ಗೊತ್ತಿತ್ತು. ಕೆಂಪು ತಲೆ ಟ್ರೋಗನ್‌ಗಾಗಿ ಒಂದಷ್ಟು ಕಸರತ್ತು ಮಾಡಲೇಬೇಕಿತ್ತು.

ಲಾಟ್ ಪಂಚರ್ ಎಂಬುದು ಪಶ್ಚಿಮ ಬಂಗಾಲ ರಾಜ್ಯದ ಒಂದು ಪರ್ವತದ ನೆತ್ತಿಯಲ್ಲಿರುವ ಹಳ್ಳಿ. ನನ್ನ ಫೋಟೊಗ್ರಫಿ ಪಯಣದಲ್ಲಿ ಇಷ್ಟೊಂದು ಸುಂದರವಾದ ಹಳ್ಳಿಯನ್ನು ನಾನೆಂದೂ ನೋಡಿದ್ದಿಲ್ಲ. ಹಾವು ಹರಿದಂತೆ ತೀರಾ ಅಂಕುಡೊಂಕಾದ ಏಕಮಾತ್ರ ತೆಳು ರಸ್ತೆ ಈ ಹಳ್ಳಿಯನ್ನು ಸೀಳಿ ಸಾಗಿತ್ತು. ಈ ಪರ್ವತದ ನಿವಾಸಿಗಳಿಗೆಲ್ಲಾ ಇದೊಂದೇ ದಾರಿ. ಯಾವ ಮನುಷ್ಯನೂ ಎಲ್ಲೂ ತಪ್ಪಿಸಿಕೊಳ್ಳುವಂತಿಲ್ಲ. ಸಾಲಗಾರನಂತೂ ಪಕ್ಕಾ ಸಿಕ್ಕಿ ಬೀಳುತ್ತಾನೆ. ಊರಿಗೆ ಬಂದು ಹೋಗುವ ಎಲ್ಲರ ಲೆಕ್ಕವನ್ನು ಸಲೀಸಾಗಿ ಎಣಿಸಿ ಹೇಳಬಹುದು. ಕತ್ತು ಎತ್ತರಿಸಿದರೆ ನೀಲಿ ಆಗಸ, ಮುಟ್ಟಿ ಮಾತಾಡಿಸುತ್ತಾ ಓಡಾಡುವ ಮೋಡಗಳು, ಸುತ್ತಲೂ ಹಸಿರು ವನರಾಶಿ, ಗೊಂಬೆ ಜೋಡಿಸಿಟ್ಟಂತೆ ಮನೆಗಳು, ನಿಲ್ಲದ ಹಕ್ಕಿಗಳ ಕಲರವದ ನಡುವೆ ಎಲ್ಲರ ಮನೆಯ ಮುಂದೆಯೂ ನರ್ತಿಸುವ ಗಾಢ ಬಣ್ಣದ ಹೂಗಳ ಹಬ್ಬ.

ಈ ಹಳ್ಳಿಯ ಕೆಳಗಿನ ಕಣಿವೆಯಲ್ಲಿ ಹುಟ್ಟಿ ಮುಂದೆ ತೀಸ್ತಾ ಮಹಾನದಿಯಲ್ಲಿ ವಿಲೀನವಾಗುವ ರಿಯಾಂಗ್ ಕೋಲಾ ಎಂಬ ಸುಂದರ ನದಿ. ಸದಾ ಮಂಜಿನಿಂದ ಮುಖ ಮುಚ್ಚಿಕೊಂಡು ನಾಚುವ ಈ ಹಳ್ಳಿ ಟಿಬೇಟಿಯನ್ ಸಂಸ್ಕೃತಿಯ ಪಡಿಯಚ್ಚು. ಊಟ, ವಸ್ತ್ರ, ದೈವ, ಮಾತು, ಮುಖ ಚಹರೆ, ಮನೆಮುಂದಿನ ಬಾವುಟಗಳು ಎಲ್ಲವೂ ಟಿಬೇಟಿಯನ್ ಮಯ.

ಯಥಾ ಪ್ರಕಾರ ಇಲ್ಲಿನ ಗಂಡಸರು ಹೆಚ್ಚು ದುಡಿಮೆ ಮಾಡದೆ ಸುಖವುಂಡು ಕಾಲ ಕಳೆಯುವ ಮೈಗಳ್ಳರು. ಹೆಣ್ಣು ಮಕ್ಕಳೇ ಹೆಚ್ಚು ಶ್ರಮವಹಿಸಿ ದುಡಿಯುವ; ಮನೆ, ಮಕ್ಕಳು ಸಂಸಾರ ಎಂದು ಪರದಾಡುವ ಜೀವಗಳು. ನಾವು ಉಳಿದಿದ್ದ ಗೆಸ್ಟ್ ಹೌಸಿನ ಯಜಮಾನಿ ಕೂಡ ಹೆಣ್ಣು ಮಗಳು. ಹೆಸರು ಸಂಗೀತಾ. ಫೋಟೊಗ್ರಫಿಗೆ ಬರುವ ಅತಿಥಿಗಳ ಊಟ, ಉಪಚಾರ, ಪಯಣದ ವ್ಯವಸ್ಥೆ ಎಲ್ಲಾ ನಿಭಾಯಿಸುತ್ತಿದ್ದ ದಿಟ್ಟೆ. ಆಕೆಗೆ ಸಣ್ಣ ಎರಡು ಮಕ್ಕಳಿದ್ದವು. ಆಕೆಯ ಗಂಡನ ಮನೆಯ ಜನರೂ ಎಂಟ್ಹತ್ತು ಮಂದಿಯಿದ್ದರು. ಎಲ್ಲರನ್ನೂ, ಎಲ್ಲವನ್ನೂ ಆಕೆ ಯಂತ್ರದಂತೆ ನಿಭಾಯಿಸುತ್ತಿದ್ದಳು. ಸೇನೆಯಿಂದ ನಿವೃತ್ತರಾದ ಮಾವ ಮಾತ್ರ ಸೊಸೆಗೆ ತುಂಬಾ ಸಹಾಯ ಮಾಡುತ್ತಿದ್ದರು. ಸೊಸೆಯಲ್ಲ ಮನೆಮಗಳಿವಳು ನನ್ನ ತಾಯಿ ಪ್ರತಿರೂಪ ಎಂದು ಭಾವನಾತ್ಮಕವಾಗಿ ಅವರೊಮ್ಮೆ ನುಡಿದರು.